# ಕೇಳಿ ತಿಳಿಯಿರಿ

? ಶ್ರೀಮಾತೆ ಶಾರದಾದೇವಿಯವರ ನುಡಿ: "ನಾನು ಯಾರ್‍ಯಾರ ಜವಾಬ್ದಾರಿಯನ್ನು ನನ್ನ ಮೇಲೆ ಹೊತ್ತುಕೊಂಡಿದ್ದೇನೆಯೋ ಅವರೆಲ್ಲರೂ ಬಂಧನದಿಂದ ಮುಕ್ತರಾಗುವವರೆಗೂ ನನಗೆ ವಿಶ್ರಾಂತಿ ಇಲ್ಲ. ನಾನು ಯಾರನ್ನು ನನ್ನ ಸ್ವಂತದವರೆಂದು ಸ್ವೀಕರಿಸಿದ್ದೇನೆಯೋ ಅವರನ್ನು ಸುಮ್ಮನೆ ಪಕ್ಕಕ್ಕೆ ಸರಿಸಿಬಿಡುವಂತಿಲ್ಲ." ಇದನ್ನು ಓದಿದ ನನಗೆ ಕೇಳಿ ತಿಳಿಯಬೇಕಾದ ಪ್ರಶ್ನೆ: ಈಗ ಜನಿಸಿರುವವರಿಗೆ ಸಹ ಶ್ರೀಶಾರದಾದೇವಿಯವರ ನುಡಿ ಅನ್ವಯಿಸುವುದೇ?

—ಮಧುಕರ ಡಿ. ಶೆಟ್ಟಿ, ಶಿರಸಿ

☆ ಶ್ರೀಮಾತೆಯವರ ಈ ನುಡಿ ಈಗ ಜನಿಸಿರುವವರಿಗೂ ಅನ್ವಯವಾಗುತ್ತದೆ. ಆದರೆ ಶ್ರೀಮಾತೆಯವರು ನಮ್ಮ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾದರೆ ನಾವು ಅವರನ್ನು **ಅನ್ಯಥಾ ಶರಣಂ ನಾಸ್ತಿ** ಎಂಬ ಭಾವದಿಂದ ಸಂಪೂರ್ಣ ಆಶ್ರಯಿಸಬೇಕು, ಮತ್ತು **ರಕ್ಷಿಷ್ಯತಿ ಇತಿ ವಿಶ್ವಾಸಃ** (ಖಂಡಿತ ರಕ್ಷಿಸುತ್ತಾರೆ ಎಂಬ ಶ್ರದ್ಧೆಯನ್ನು) ಗಳಿಸಬೇಕು. ಶ್ರೀಕೃಷ್ಣನೂ ಭಗವದ್ಗೀತೆಯಲ್ಲಿ ಇದೇ ಭರವಸೆಯನ್ನು ನೀಡಿದ್ದಾನೆ:

ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್ ॥

"ನನ್ನಿಂದ ಬೇರೆಯಾಗದೆ, ಬೇರೆ ಯಾವ ಪ್ರಯೋಜನವನ್ನೂ ಬಯಸದೆ ಯಾರು ನನ್ನನ್ನು ಧ್ಯಾನಿಸುತ್ತಿರುವರೋ, ಉಪಾಸನೆ ಮಾಡುತ್ತಿರುವರೋ, ನಿತ್ಯವೂ ನನ್ನಲ್ಲಿ ಒಂದಾಗಿರುವರೋ ಅಂತಹ ಭಕ್ತರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ."

ನಾವು ಶ್ರೀಮಾತೆಯವರ ಸ್ವಂತದವರಾಗಬೇಕು. ಯಾರನ್ನು ಅವರು ತಮ್ಮ ಸ್ವಂತದವರೆಂದು ಸ್ವೀಕರಿಸುತ್ತಾರೆ? ನಮಗೆ ನಮ್ಮ ಸ್ವಂತದ್ದು ಯಾವುದೂ ಇಲ್ಲದಾಗ, ನಮ್ಮ ಅಂತರಂಗ ಬರಿದಾದಾಗ. ಈಗ ಅದು ಅಹಂಕಾರದಿಂದ ತುಂಬಿಹೋಗಿದೆ. ಇದೇ ಅವರ ಅನುಗ್ರಹವು ನಮ್ಮ ಕಡೆ ಹರಿದುಬರಲು ತಡೆಯಾಗಿದೆ. ಅಹಂಕಾರವು ಹೊರಟುಹೋಗಿ ನಾವು ಮಗುವಿನಂತಾದಾಗ ಆ ತಾಯಿ ನಮ್ಮನ್ನು ಎತ್ತಿಕೊಳ್ಳುತ್ತಾಳೆ, ತನ್ನ ಸ್ವಂತದವರೆಂದು ಸ್ವೀಕರಿಸುತ್ತಾಳೆ.

? ಧಾರ್ಮಿಕ ಗ್ರಂಥಗಳನ್ನು ಓದಿದ ನಂತರ ಕೆಲವರು ಅತಿಯಾಗಿ ಪಾಪಪ್ರಜ್ಞೆಯನ್ನು ಬೆಳೆಸಿಕೊಂಡು ಮಾನವಸಹಜವಾದ ದೌರ್ಬಲ್ಯಗಳನ್ನು ಕೊರತೆಗಳೆಂದು ತಿಳಿಯುತ್ತಾರೆ, ಖಿನ್ನತೆಗೊಳಗಾಗುತ್ತಾರೆ. ನೈತಿಕ ಪ್ರಜ್ಞೆಯಿಲ್ಲದವರು ರಾಜಾರೋಷವಾಗಿ ತಪ್ಪನ್ನೇ ಮಾಡುವುದೂ ಕಂಡುಬರುತ್ತದೆ. ಧರ್ಮವು ಮನಸ್ಸಿಗೆ ಶಕ್ತಿಯನ್ನು ನೀಡಬೇಕಲ್ಲವೇ? ದಯಮಾಡಿ ತಿಳಿಸಿ.

☆ ನಮ್ಮಲ್ಲಿ ಧಾರ್ಮಿಕ ಪ್ರವೃತ್ತಿ ಜಾಗ್ರತವಾದಾಗ ಪಾಪಪ್ರಜ್ಞೆಯು ಬೆಳೆಯುವುದು ಸ್ವಾಭಾವಿಕ. ಆಗ ನಮಗೆ ಸಣ್ಣ ಸಣ್ಣ ತಪ್ಪುಗಳೂ ದೊಡ್ಡದಾಗಿ ಕಾಣಿಸುತ್ತವೆ. ಒಬ್ಬ ಸಾಮಾನ್ಯ ವ್ಯಕ್ತಿಯು ಯಾವುದೇ ಸಂಕೋಚವಿಲ್ಲದೆ ಮಾಡಬಹುದಾದ ಅನೈತಿಕ ಕ್ರಿಯೆಗಳಲ್ಲಿ ಸ್ವಲ್ಪಾಂಶವನ್ನು ಮಾಡಿದರೂ ಯಥಾರ್ಥ ಧಾರ್ಮಿಕ ವ್ಯಕ್ತಿಯು ಅದಕ್ಕಾಗಿ ತುಂಬ ಪರಿತಪಿಸುತ್ತಾನೆ. ಈ ಪರಿತಾಪವೇ ಮತ್ತೆ ಅದನ್ನು ಮಾಡದಂತೆ ಅವನಿಗೆ ತಡೆಯಾಗುತ್ತದೆ. ಆದರೆ ಈ ಪರಿತಾಪ ಅವನ ಧಾರ್ಮಿಕ ಉತ್ಸಾಹವನ್ನು ಕುಗ್ಗಿಸಬಾರದು, ಮನಸ್ಸನ್ನು ದುರ್ಬಲಗೊಳಿಸಬಾರದು. ಧಾರ್ಮಿಕ ಜೀವನ ಮನಸ್ಸಿಗೆ ಶಕ್ತಿಯನ್ನು ನೀಡುತ್ತದೆ, ನಿಜ. ಹಾಗೆಯೇ ಅದು ಮನಸ್ಸನ್ನು ಹೆಚ್ಚು ಸೂಕ್ಷ್ಮವನ್ನಾಗಿಯೂ ಮಾಡುತ್ತದೆ. ಯೋಗಸೂತ್ರವು ಹೇಳುವಂತೆ ಯೋಗಿಯ ಮನಸ್ಸು ಕಣ್ಣುಗುಡ್ಡೆಯಂತೆ. ಕಣ್ಣುಗುಡ್ಡೆಯ ಮೇಲೆ ಸಣ್ಣ ಧೂಳಿನ ಕಣವು ಬಿದ್ದರೂ ಅದು ತೀವ್ರವಾದ ವೇದನೆಯನ್ನು ಉಂಟುಮಾಡುತ್ತದೆ. ದೇಹದ ಬೇರೆ ಭಾಗಗಳಲ್ಲಿ ಹಾಗಾಗುವುದಿಲ್ಲ. ಯೋಗಿಗೆ ತಾನು ಮಾಡುವ ಸಣ್ಣ ತಪ್ಪೂ ದೊಡ್ಡದಾಗಿ ಕಾಣುತ್ತದೆ. ಅದಕ್ಕಾಗಿ ಅವನು ಪರಿತಪಿಸುತ್ತಾನೆ. ಇದು ಅನಿವಾರ್ಯ. ಈ ಸಂಕಟಗಳ ಮೂಲಕ ಅವನು ಹಾದುಹೋಗಬೇಕು. ಮುಂದೆ ಹಳೆಯ ಸಂಸ್ಕಾರಗಳ ಸೆಳೆತ ಕಡಮೆಯಾದಾಗ ಅವನು ಹೆಚ್ಚು ಆನಂದವನ್ನು ಅನುಭವಿಸುತ್ತಾನೆ. ಅದಕ್ಕೇ ಸ್ವಾಮಿ ವಿವೇಕಾನಂದರು ಹೇಳಿದ್ದು: The way to heaven is through hell (ನರಕದ ಮೂಲಕವೇ ಸ್ವರ್ಗಕ್ಕೆ ಹೋಗಬೇಕು) ಎಂದು. ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

ಯಶ್ಚ ಮೂಢತಮೋ ಲೋಕೇ
ಯಶ್ಚ ಬುದ್ಧೇಃ ಪಾರಂ ಗತಃ ।
ತಾವುಭೌ ಸುಖಮೇಧೇತೇ
ಕ್ಲಿಶ್ಯತ್ಯಂತರಿತೋ ಜನಾಃ ॥

"ಈ ಲೋಕದಲ್ಲಿ ಅತ್ಯಂತ ಮೂಢನೂ, ಬುದ್ಧಿಯನ್ನು ಮೀರಿ ಹೋದವನೂ, ಸುಖವನ್ನು ಅನುಭವಿಸುತ್ತಾರೆ. ಈ ಇಬ್ಬರ ಮಧ್ಯದ ಹಂತದಲ್ಲಿರುವ ಜನರು ಯಾತನೆಯನ್ನು ಅನುಭವಿಸಬೇಕಾಗುತ್ತದೆ."

**ಉತ್ತರಗಳನ್ನು ನೀಡಿದವರು :** ಸ್ವಾಮಿ ನಿತ್ಯಸ್ಥಾನಂದಜಿ, ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಮೈಸೂರು